INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-8, Issue -02,March-April, 2026
Page No,12-23
Peer -Reviewed, Refereed Journal

# ಲೋಹಿಯಾ ಮತ್ತು ಸಮಾಜವಾದಿ ವಿಚಾರಧಾರೆಗಳ ಕುರಿತ ವಿವರಣಾತ್ಮಕ ವಿಶ್ಲೇಷಣೆ

**ಡಾ.ಪಾರ್ವತಮ್ಮ.ಎಂ.**[1]

**ಸಾರಾಂಶ:** ರಾಮ ಮನೋಹರ ಲೋಹಿಯಾ ಅವರು ಭಾರತದ ಪ್ರಮುಖ ಸಮಾಜವಾದಿ ಚಿಂತಕರಾಗಿದ್ದು, ಅವರ ವಿಚಾರಧಾರೆಗಳು ಸಮಾನತೆ, ನ್ಯಾಯ ಮತ್ತು ಮಾನವಮೌಲ್ಯಗಳ ಆಧಾರದ ಮೇಲೆ ರೂಪುಗೊಂಡಿವೆ. ಲೋಹಿಯಾ ಅವರು ಸಮಾಜವಾದವನ್ನು ಭಾರತೀಯ ಪರಿಸ್ಥಿತಿಗೆ ಹೊಂದುವಂತೆ ರೂಪಿಸುವ ಪ್ರಯತ್ನ ಮಾಡಿದರು. ಲೋಹಿಯಾ ಅವರು ಸಮಾಜದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಆರ್ಥಿಕ ಅಸಮಾನತೆಯನ್ನು ನಿವಾರಿಸಲು ಒತ್ತಾಯಿಸಿದರು. ಅವರು "ಸಪ್ತ ಕ್ರಾಂತಿ" ಎಂಬ ತತ್ವದ ಮೂಲಕ ಸಮಾನತೆಯ ಹಾದಿಯನ್ನು ಸೂಚಿಸಿದರು. ಈ ಸಪ್ತ ಕ್ರಾಂತಿಗಳು ಜಾತಿಭೇದ, ಲಿಂಗ ಅಸಮಾನತೆ, ವರ್ಣಭೇದ, ಆರ್ಥಿಕ ಶೋಷಣೆಗಳಂತಹ ಸಮಸ್ಯೆಗಳನ್ನು ನಿವಾರಿಸುವುದನ್ನು ಉದ್ದೇಶಿಸಿವೆ. ಲೋಹಿಯಾ ಅವರು ಅಧಿಕಾರವನ್ನು ಕೇಂದ್ರದಿಂದ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಬೇಕು ಎಂದು ನಂಬಿದರು. ಇದು ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ. ಅವರು ಪಾಶ್ಚಾತ್ಯ ಸಮಾಜವಾದವನ್ನು ನೇರವಾಗಿ ಅನುಸರಿಸದೇ, ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಸಮಾಜವಾದವನ್ನು ರೂಪಿಸಿದರು. ಸ್ಥಳೀಯ ಭಾಷೆಗಳ ಅಭಿವೃದ್ಧಿ ಮತ್ತು ಸಂಸ್ಕೃತಿಯ ಉಳಿವಿಗೂ ಅವರು ಮಹತ್ವ ನೀಡಿದರು. ಮಹಾತ್ಮ ಗಾಂಧಿ ಅವರ ಪ್ರಭಾವದಿಂದ ಲೋಹಿಯಾ ಅವರು ಅಹಿಂಸಾತ್ಮಕ ಹೋರಾಟದ ಮಾರ್ಗವನ್ನು ಅನುಸರಿಸಿದರು. ಲೋಹಿಯಾ ಅವರ ಸಮಾಜವಾದಿ ವಿಚಾರಧಾರೆಗಳು ಸಮಾನತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸಲು ಪ್ರಮುಖ ಮಾರ್ಗದರ್ಶಕವಾಗಿವೆ. ಅವರು ಸಮಾಜದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವುದಕ್ಕಾಗಿ ಪ್ರಾಯೋಗಿಕ ಮತ್ತು ಮಾನವೀಯ ದೃಷ್ಟಿಕೋನವನ್ನು ನೀಡಿದರು.

**ಪ್ರಮುಖ ಪದಗಳು:** ರಾಮ ಮನೋಹರ ಲೋಹಿಯಾ, ಸಮಾಜವಾದ, ಸಮಾನತೆ, ಸಾಮಾಜಿಕ ನ್ಯಾಯ, ಸಪ್ತ ಕ್ರಾಂತಿ, ಜಾತಿ ವ್ಯವಸ್ಥೆ, ವರ್ಗ ಸಂಘರ್ಷ, ಲಿಂಗ ಸಮಾನತೆ, ಆರ್ಥಿಕ ಅಸಮಾನತೆ,

---

[1]. **ಸಹಪ್ರಾಧ್ಯಾಪಕರು,ಇತಿಹಾಸ ಅಧ್ಯಯನ ವಿಭಾಗ, ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚೆನ್ನಗಿರಿ, ದಾವಣಗೆರೆ ಜಿಲ್ಲೆ**

ವಿಕೇಂದ್ರೀಕರಣ, ಗ್ರಾಮ ಸ್ವರಾಜ್ಯ, ಭಾರತೀಯ ಸಮಾಜವಾದ, ಭಾಷಾ ಸ್ವಾತಂತ್ರ್ಯ, ಸಾಂಸ್ಕೃತಿಕ ವೈವಿಧ್ಯತೆ, ಅಹಿಂಸಾತ್ಮಕ ಹೋರಾಟ

ಭಾರತದ ರಾಜಕೀಯ ಮತ್ತು ಸಾಮಾಜಿಕ ಚಿಂತನೆಗಳಲ್ಲಿ ರಾಮ ಮನೋಹರ ಲೋಹಿಯಾ ಅವರ ಸ್ಥಾನವು ಅತ್ಯಂತ ಪ್ರಮುಖವಾಗಿದೆ. ಅವರು ಕೇವಲ ರಾಜಕೀಯ ನಾಯಕನಷ್ಟೇ ಅಲ್ಲ, ಒಂದು ಆಳವಾದ ಚಿಂತಕ ಮತ್ತು ಸಮಾಜ ಸುಧಾರಕರಾಗಿದ್ದರು. ಲೋಹಿಯಾ ಅವರ ಸಮಾಜವಾದಿ ವಿಚಾರಧಾರೆಗಳು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮಾನವಮೌಲ್ಯಗಳ ಮೇಲೆ ಆಧಾರಿತವಾಗಿದ್ದು, ಭಾರತದ ಸಮಾಜೋ–ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ರೂಪುಗೊಂಡಿವೆ. ಭಾರತೀಯ ಸಮಾಜದಲ್ಲಿ ನೆಲಸಿರುವ ಜಾತಿ, ವರ್ಗ, ಲಿಂಗ ಮತ್ತು ಆರ್ಥಿಕ ಅಸಮಾನತೆಗಳನ್ನು ನಿವಾರಿಸುವುದೇ ಲೋಹಿಯಾ ಅವರ ಮುಖ್ಯ ಗುರಿಯಾಗಿತ್ತು. ಈ ಹಿನ್ನೆಲೆಯಲ್ಲೇ ಅವರು "ಸಪ್ತ ಕ್ರಾಂತಿ" ಎಂಬ ತತ್ವವನ್ನು ಪ್ರತಿಪಾದಿಸಿ, ಸಮಾಜದಲ್ಲಿ ಸಮಗ್ರ ಬದಲಾವಣೆಯನ್ನು ತರಲು ಮಾರ್ಗದರ್ಶನ ನೀಡಿದರು. ಅವರ ಚಿಂತನೆಗಳು ಪಾಶ್ಚಾತ್ಯ ಸಮಾಜವಾದದ ಪ್ರಭಾವವಿದ್ದರೂ, ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಮೌಲ್ಯಗಳನ್ನು ಒಳಗೊಂಡಿವೆ. ಮಹಾತ್ಮ ಗಾಂಧಿ ಅವರ ಅಹಿಂಸಾ ತತ್ವದ ಪ್ರಭಾವದಿಂದ ಲೋಹಿಯಾ ಅವರು ಶಾಂತಿಯುತ ಮತ್ತು ಜನಪರ ಹೋರಾಟವನ್ನು ಒತ್ತಿಹೇಳಿದರು. ವಿಕೇಂದ್ರೀಕರಣ, ಗ್ರಾಮ ಸ್ವರಾಜ್ಯ ಮತ್ತು ಭಾಷಾ ಸ್ವಾತಂತ್ರ್ಯದಂತಹ ವಿಚಾರಗಳು ಅವರ ಚಿಂತನೆಗಳಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಈ ಅಧ್ಯಯನವು ಲೋಹಿಯಾ ಅವರ ಸಮಾಜವಾದಿ ವಿಚಾರಧಾರೆಗಳನ್ನು ವಿಶ್ಲೇಷಿಸಿ, ಅವುಗಳ ಪ್ರಸ್ತುತತೆಯನ್ನು ಮತ್ತು ಮಹತ್ವವನ್ನು ಬೆಳಗಿಸುವುದನ್ನು ಉದ್ದೇಶಿಸುತ್ತದೆ.

ಸಮಾಜವಾದವು ವಿಶ್ವದ ಅತ್ಯಂತ ಜನಪ್ರಿಯವಾದ ಸಮಜೋ–ರಾಜಕೀಯ ತತ್ವಗಳಲ್ಲಿ ಒಂದಾಗಿದೆ. ಇದು ಸಮಾನತೆಯ ಆಧಾರದ ಮೇಲೆ ಹೊಸ ಸಮಾಜ ವ್ಯವಸ್ಥೆಯನ್ನು ನಿರ್ಮಿಸುವುದನ್ನು ಉದ್ದೇಶಿಸುತ್ತದೆ. ಅಂದರೆ, ಬಂಡವಾಳಶಾಹಿಯ ಶೋಷಣೆ ಇಲ್ಲದ ಸಮಾಜವನ್ನು ರಚಿಸುವ ಸಾಧನವೇ ಸಮಾಜವಾದ ಎಂದು ಪರಿಗಣಿಸಲಾಗುತ್ತದೆ. ಈ ರೀತಿಯಾಗಿ, ಸಮಾಜವಾದವು ಮಾನವ ಸಮಾನತೆ ಮತ್ತು ನ್ಯಾಯದ ಗುರಿಗೆ ದಾರಿದೀಪವಾಗಿಯೂ ಬೆಳೆಯುತ್ತಿದೆ. ಸಮಾಜವಾದಿ ಚಳವಳಿಯ ಇತಿಹಾಸದಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸ್ಥಾಪನೆ ಒಂದು ಮಹತ್ವದ ಮೈಲಿಗಲ್ಲಾಗಿದೆ. ಇದು ಕಾರ್ಮಿಕರನ್ನು ಒಗ್ಗೂಡಿಸಿ, ಅವರ ಹಕ್ಕುಗಳನ್ನು ರಕ್ಷಿಸುವ ಮತ್ತು ಸಂಘಟಿತ ಶಕ್ತಿಯನ್ನು ನಿರ್ಮಿಸುವ ಪ್ರಮುಖ ವೇದಿಕೆಯಾಗಿದೆ. ಈ ಪ್ರಕ್ರಿಯೆ ಕಾರ್ಲ್‌ಮಾರ್ಕ್ಸ್ ಅವರ ಮಾರ್ಕ್ಸ್‌ವಾದದ ತತ್ವಗಳಿಗೆ ಬಲ ನೀಡುತ್ತದೆ. ಮಾರ್ಕ್ಸ್‌ವಾದದ ಪ್ರಕಾರ, ರಾಜ್ಯ ವ್ಯವಸ್ಥೆ ಒಂದು ನಿರ್ದಿಷ್ಟ ವರ್ಗವನ್ನು

ಪ್ರತಿನಿಧಿಸುವುದರಿಂದ, ಅದನ್ನು ಮೂಲದಿಂದಲೇ ಪರಿವರ್ತಿಸಬೇಕು ಅಥವಾ ಅಗತ್ಯವಿದ್ದರೆ ನಿರ್ಮೂಲ ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಜಗತ್ತಿನ ಅನೇಕ ಬಡ ರಾಷ್ಟ್ರಗಳು ಸಮಾಜವಾದವನ್ನು ತಮ್ಮ ಮುಖ್ಯ ಗುರಿಯೆಂದು ಘೋಷಿಸಿಕೊಂಡಿವೆ. ಭಾರತದಲ್ಲಿಯೂ ಸಮಾಜವಾದಿ ಆಂದೋಲನವು ಆರಂಭವಾಗಿ ಎಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲ ಕಳೆದಿದ್ದು, ಇದರ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು ಉಂಟಾಗಿವೆ. ವಿವಿಧ ರಾಜಕೀಯ ಪಕ್ಷಗಳಲ್ಲಿ ಸಮಾಜವಾದಿ ಚಿಂತನೆ ಹರಿದು ಹಂಚಿಕೊಂಡಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಸಮಾಜವಾದಿ ಚಿಂತನೆ ಒಂದು ರೀತಿಯಲ್ಲಿ ಸ್ಥಗಿತಗೊಂಡಂತಿದೆ (ನಿಂತ ನೀರಿನಂತಾಗಿದೆ) ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತದೆ. 1977ರಲ್ಲಿ ಸಮಾಜವಾದಿ ಪಕ್ಷವು ಜನತಾ ಪಕ್ಷದಲ್ಲಿ ವಿಲೀನಗೊಂಡಿದ್ದು ಭಾರತೀಯ ಸಮಾಜವಾದಿ ಆಂದೋಲನದ ಇತಿಹಾಸದಲ್ಲಿ ಮಹತ್ವದ ತಿರುವಾಗಿತ್ತು. ಭಾರತೀಯ ಸಮಾಜವಾದಿ ಚಳವಳಿಯಲ್ಲಿ ರಾಮ ಮನೋಹರ ಲೋಹಿಯಾ ಅವರು ಪ್ರಾರಂಭಿಸಿದ ಒಡಕು–ವಿಲೀನಗಳ ಪ್ರಕ್ರಿಯೆಯ ಪರಿಣಾಮವಾಗಿ, ಇಂದು ಸಮಾಜವಾದಿಗಳು ದೇಶದ ವಿವಿಧ ರಾಜಕೀಯ ಪಕ್ಷಗಳಲ್ಲಿ ಹರಡಿಕೊಂಡಿರುವುದು ಕಂಡುಬರುತ್ತದೆ. ಈ ಬೆಳವಣಿಗೆಗಳು ಒಂದು ಮಹತ್ವದ ಸಂದೇಶವನ್ನು ನೀಡುತ್ತವೆ. ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಸಮಾಜವಾದಿ ಪಕ್ಷವನ್ನು ಕಟ್ಟುವ ಪ್ರಯತ್ನಕ್ಕಿಂತ, ಪ್ರಾದೇಶಿಕ ಅಗತ್ಯಗಳಿಗೆ ಅನುಗುಣವಾಗಿ ಕಾರ್ಯಾಚರಣೆಯ ಸ್ವಾತಂತ್ರ್ಯ ಹೊಂದಿರುವ ಪ್ರಾದೇಶಿಕ ಸಮಾಜವಾದಿ ಪಕ್ಷಗಳನ್ನು ನಿರ್ಮಿಸುವುದು ಹೆಚ್ಚು ಪರಿಣಾಮಕಾರಿ ಎನ್ನುವುದಾಗಿದೆ. ಇದರ ಮೂಲಕ ಸ್ಥಳೀಯ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಹಿಡಿದು, ಜನರೊಂದಿಗೆ ನೇರ ಸಂಪರ್ಕ ಹೊಂದಿದ ರಾಜಕೀಯ ಕಾರ್ಯಾಚರಣೆಯನ್ನು ಬಲಪಡಿಸಬಹುದು.

ಭಾರತದ ಸಮಾಜವಾದಿ ಆಂದೋಲನದ ಎರಡನೆಯ ತಲೆಮಾರಿನ ನಾಯಕರು ಸಂಘಟನಾತ್ಮಕ ಹಾಗೂ ಸೈದ್ಧಾಂತಿಕ ಎರಡೂ ದೃಷ್ಟಿಕೋನಗಳಲ್ಲಿ ಹಿನ್ನಡೆಯನ್ನು ಅನುಭವಿಸಿದ್ದಾರೆ. ರಾಮ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ, ಅಶೋಕ್ ಮೆಹ್ತಾ ಅವರಂತಹ ಹಿರಿಯ ನಾಯಕರು ಸಮಾಜವಾದಿ ಚಳುವಳಿಯಿಂದ ದೂರವಾದ ನಂತರ, ಸೈದ್ಧಾಂತಿಕ ಚಿಂತನೆ ಬಹುತೇಕ ಸ್ಥಗಿತಗೊಂಡಂತಾಗಿದೆ. ಈ ಹಿನ್ನೆಲೆಯಲ್ಲಿ, ಸಮಾಜವಾದಿ ಚಳುವಳಿಗೆ ಸ್ಪಷ್ಟವಾದ ದಿಕ್ಕು ಮತ್ತು ನವೀನ ಕಾರ್ಯಕ್ರಮಗಳ ಕೊರತೆ ಕಂಡುಬರುತ್ತದೆ. ವಿಶೇಷವಾಗಿ ಭೂ ಸುಧಾರಣೆಗಳ ನಂತರ, ಭೂಮಿಯ ಹಂಚಿಕೆ ಮತ್ತು ಬಳಕೆಯ ಕುರಿತು ಸಮಾಜವಾದಿ ದೃಷ್ಟಿಕೋನ ಏನಾಗಿರಬೇಕು ಎಂಬುದರ ಬಗೆಗೆ ಸಮಗ್ರ ಚಿಂತನೆ ರೂಪುಗೊಳ್ಳದಿರುವುದು ದೊಡ್ಡ ದೌರ್ಬಲ್ಯವಾಗಿದೆ. ಇದರಿಂದಾಗಿ ಕರ್ನಾಟಕದಲ್ಲಿ ಭೂ ಸುಧಾರಣೆ ಕಾನೂನುಗಳು ಜಾರಿಗೆ ಬಂದಿದ್ದರೂ, ಅವುಗಳ ಪರಿಣಾಮಕಾರಿತ್ವವು ನಿರೀಕ್ಷಿತ ಮಟ್ಟದಲ್ಲಿ

ಸಾಧನೆಯಾಗಿಲ್ಲ ಎಂಬುದು ಗೋಚರಿಸುತ್ತದೆ. ಈ ಸ್ಥಿತಿ ಸಮಾಜವಾದಿ ಚಳುವಳಿಯ ಸೈದ್ಧಾಂತಿಕ ಮತ್ತು ಕಾರ್ಯಾತ್ಮಕ ದುರ್ಬಲತೆಯನ್ನು ಪ್ರತಿಬಿಂಬಿಸುತ್ತದೆ.

ಕರ್ನಾಟಕದಲ್ಲಿ ಭೂ ಸುಧಾರಣೆ ಕ್ರಮಗಳು ಮೂರು ಪ್ರಮುಖ ಹಂತಗಳಲ್ಲಿ ಜಾರಿಗೊಂಡಿವೆ. ಅವುಗಳೆಂದರೆ; ಮೊದಲನೆಯದು; ಜಮೀನ್ದಾರಿ ಪದ್ಧತಿಯ ರದ್ಧತಿ, ಎರಡನೆಯದು; ಗೇಣಿದಾರರಿಗೆ ರಕ್ಷಣೆಯನ್ನು ಒದಗಿಸುವುದು ಮತ್ತು ಮೂರನೆಯದು; ಗೇಣಿದಾರರಿಗೆ ಅವರು ಕೃಷಿ ಮಾಡುತ್ತಿರುವ ಭೂಮಿಯ ಒಡೆತನವನ್ನು ನೀಡುವುದು. ಈ ಹಂತಗಳು ಭೂ ಸಂಬಂಧಿತ ಅನ್ಯಾಯಗಳನ್ನು ತಗ್ಗಿಸಲು ಮಹತ್ವದ ಹೆಜ್ಜೆಗಳಾಗಿವೆ. ಆದಾಗ್ಯೂ, ಸಮಾಜವಾದಿ ಚಳುವಳಿಯ ಪ್ರಮುಖ ಗುರಿಯಾಗಿರುವ ಹೆಚ್ಚುವರಿ (ಮಿತಿ ಮೀರಿದ) ಭೂಮಿಯನ್ನು ಭೂಹೀನರಿಗೆ ಹಂಚುವ ಕಾರ್ಯ ಸಂಪೂರ್ಣವಾಗಿ ನೆರವೇರಿಲ್ಲ. ಈ ಅಂಶವೇ ಭೂ ಸುಧಾರಣೆಯ ಮೂಲ ಆತ್ಮವಾಗಿದ್ದು, ಅದನ್ನು ಪೂರ್ಣಗೊಳಿಸದೇ ಸಮಾಜದಲ್ಲಿ ಸಮಾನತೆ ಸಾಧಿಸುವುದು ಕಷ್ಟಕರ. ಹೀಗಾಗಿ, ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಸಮರ್ಪಕವಾಗಿ ಹಂಚುವ ಕಾರ್ಯವನ್ನು ಸಂಪೂರ್ಣಗೊಳಿಸಿದಾಗ ಮಾತ್ರ ಸಮಾಜವಾದದ ಆದರ್ಶಗಳು ನಿಜವಾಗಿ ಸಾಕಾರವಾಗುತ್ತವೆ.

ರಾಮ ಮನೋಹರ ಲೋಹಿಯಾ ಅವರು ಅಪ್ಪಟ ಚಿಂತಕ, ಸದೃಢ ನಾಯಕ, ಬಂಡಾಯಗಾರ ಹಾಗೂ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಸಮಾಜವಾದಿ ಆಂದೋಲನಕ್ಕೆ ಅವರು ನೀಡಿದ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ಲೋಹಿಯಾ ಅವರು ತಮ್ಮ ಚಿಂತನೆಯ ದಿಗಂತವನ್ನು ಯಾವುದೇ ಸೀಮಿತ ಚೌಕಟ್ಟಿನಲ್ಲಿ ಕಟ್ಟಿಹಾಕಿಕೊಳ್ಳದೆ, ಪಾಶ್ಚಾತ್ಯ ಅಥವಾ ರಷ್ಯನ್ ವಿಚಾರಗಳನ್ನು ಅಂಧವಾಗಿ ಅನುಸರಿಸುವುದನ್ನು ನಿರಾಕರಿಸಿದ ಮೊದಲ ಭಾರತೀಯ ಸಮಾಜವಾದಿ ಚಿಂತಕರಲ್ಲಿ ಒಬ್ಬರಾಗಿದ್ದರು. ಅವರು ಭಾರತೀಯ ಸಮಾಜದ ವಾಸ್ತವಿಕತೆಗೆ ಅನುಗುಣವಾಗಿ ಸ್ವತಂತ್ರವಾದ ಸಮಾಜವಾದಿ ದಾರಿಯನ್ನು ರೂಪಿಸಲು ಪ್ರಯತ್ನಿಸಿದರು. ಮಹಾತ್ಮ ಗಾಂಧೀಜಿ ಅವರ ಆದರ್ಶಗಳಿಂದ ಲೋಹಿಯಾ ಪ್ರಭಾವಿತರಾದರೂ, ಅವರು ಗಾಂಧೀಜಿ ಅವರಸ ಚಿಂತನೆಗಳನ್ನು ಕುರುಡು ಅನುಸರಣೆ ಮಾಡಲಿಲ್ಲ. ಬದಲಾಗಿ, ತಾತ್ವಿಕ ಸ್ವಾತಂತ್ರ್ಯ ಮತ್ತು ವಿಮರ್ಶಾತ್ಮಕ ಚಿಂತನೆಯ ಮೂಲಕ ತಮ್ಮದೇ ಆದ ವಿಶಿಷ್ಟ ಸಮಾಜವಾದಿ ದೃಷ್ಟಿಕೋನವನ್ನು ರೂಪಿಸಿದರು.

ರಾಮ ಮನೋಹರ ಲೋಹಿಯಾ ಅವರು ಕೆಟ್ಟ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ತಡೆಗಟ್ಟುವ ಪ್ರಯತ್ನದಲ್ಲಿದ್ದಾಗಲೇ, ಸೃಜನಶೀಲ ಕ್ರಿಯೆಯ ಮಹತ್ವವನ್ನು ಆಳವಾಗಿ ಅರಿತುಕೊಂಡಿದ್ದರು. ಅವರ ದೃಷ್ಟಿಯಲ್ಲಿ ಸಮಾಜ ಪರಿವರ್ತನೆ ಕೇವಲ ವಿರೋಧ ಮತ್ತು ಹೋರಾಟದ ಮೂಲಕ ಮಾತ್ರ ಸಾಧ್ಯವಲ್ಲ; ಅದು ಹೊಸ ಮೌಲ್ಯಗಳು, ಹೊಸ ಸಂಸ್ಥೆಗಳು ಮತ್ತು ಜನಪರ ಕಾರ್ಯಕ್ರಮಗಳನ್ನು ನಿರ್ಮಿಸುವ ಸೃಜನಾತ್ಮಕ ಪ್ರಕ್ರಿಯೆಯೂ ಆಗಿರಬೇಕು. ಲೋಹಿಯಾ ಅವರು ರಾಜಕೀಯ ಮತ್ತು

ಅಧಿಕಾರವನ್ನು ಪರಸ್ಪರ ಬೇರ್ಪಡಿಸಲಾಗುವುದಿಲ್ಲ ಎಂಬ ನಿಲುವನ್ನು ಹೊಂದಿದ್ದರು. ಅಧಿಕಾರವು ಸಮಾಜ ಬದಲಾವಣೆಗೆ ಅಗತ್ಯವಾದ ಸಾಧನವೆಂದು ಅವರು ಕಂಡರು. ಆದ್ದರಿಂದ, ಅಧಿಕಾರವನ್ನು ಸಂಪೂರ್ಣವಾಗಿ ತಳ್ಳಿಹಾಕುವುದಕ್ಕಿಂತ, ಅದನ್ನು ಜನಹಿತಕ್ಕಾಗಿ ಬಳಸುವ ಜವಾಬ್ದಾರಿಯುತ ರಾಜಕೀಯವೇ ಮುಖ್ಯ ಎಂದು ಅವರು ಒತ್ತಿಹೇಳಿದರು. ಈ ದೃಷ್ಟಿಕೋನವು ಸಮಾಜವಾದಿ ಚಳುವಳಿಗೆ ವಾಸ್ತವಿಕತೆ ಮತ್ತು ಪ್ರಾಯೋಗಿಕತೆಯ ದಿಕ್ಕನ್ನು ನೀಡಿತು. ಭಾರತದ ಬಹುಪಾಲು ಜನತೆ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಾರೆ ಎಂಬ ಸತ್ಯವನ್ನು ಲೋಹಿಯಾ ಅವರು ಸ್ಪಷ್ಟವಾಗಿ ಅರಿತುಕೊಂಡಿದ್ದರು. ಹೀಗಾಗಿ, ಅವರ ಸಮಾಜವಾದಿ ಚಿಂತನೆಗಳು ಗ್ರಾಮೀಣ ಭಾರತದ ಸಮಸ್ಯೆಗಳ ಸುತ್ತಲೇ ರೂಪುಗೊಂಡಿದ್ದವು. ಬಡ ರೈತರು, ಭೂಹೀನ ಕೃಷಿಕರು ಮತ್ತು ಕೃಷಿ ಕಾರ್ಮಿಕರ ಜೀವನಮಟ್ಟವನ್ನು ಮೇಲಕ್ಕೆತ್ತುವುದು ಅವರ ಪ್ರಮುಖ ಗುರಿಯಾಗಿತ್ತು. ಅವರು ಭೂ ಹಂಚಿಕೆ, ಕೃಷಿ ಉತ್ಪಾದನೆ, ಉದ್ಯೋಗ ಸೃಷ್ಟಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ನೀತಿಗಳನ್ನು ರೂಪಿಸುವ ಅಗತ್ಯವನ್ನು ಸೂಚಿಸಿದರು. ಇದಲ್ಲದೆ, ಲೋಹಿಯಾ ಅವರು ಆರ್ಥಿಕ ಸಮಾನತೆ ಜೊತೆಗೆ ಸಾಮಾಜಿಕ ಸಮಾನತೆಯನ್ನೂ ಬಹುಮುಖ್ಯವಾಗಿ ಪರಿಗಣಿಸಿದರು. ಜಾತಿ, ಲಿಂಗ ಮತ್ತು ವರ್ಗ ಆಧಾರಿತ ಅಸಮಾನತೆಗಳನ್ನು ನಿವಾರಿಸದೆ ನಿಜವಾದ ಸಮಾಜವಾದ ಸಾಧ್ಯವಿಲ್ಲವೆಂದು ಅವರು ನಂಬಿದರು. ಈ ದೃಷ್ಟಿಯಿಂದ ಅವರ "ಸಪ್ತ ಕ್ರಾಂತಿ" ತತ್ವವು ಸಮಾಜದ ವಿವಿಧ ಅಸಮಾನತೆಗಳ ವಿರುದ್ಧ ಸಮಗ್ರ ಹೋರಾಟಕ್ಕೆ ಕರೆ ನೀಡುತ್ತದೆ. ಲೋಹಿಯಾ ಅವರ ಚಿಂತನೆಗಳು ಕೇವಲ ಸೈದ್ಧಾಂತಿಕವಾಗಿಯೇ ಉಳಿಯದೇ, ಪ್ರಾಯೋಗಿಕ ಮತ್ತು ಜನಪರ ದಿಕ್ಕಿನಲ್ಲಿ ಸಾಗುತ್ತವೆ. ಅವರು ಸಮಾಜವಾದವನ್ನು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಅಳವಡಿಸಿ, ಸಮಾನತೆ ಮತ್ತು ನ್ಯಾಯಾಧಾರಿತ ಸಮಾಜ ನಿರ್ಮಾಣಕ್ಕೆ ದಾರಿದೀಪವಾಗಿದ್ದಾರೆ.

ಅತ್ಯಂತ ಮಹತ್ವವಾದ ಸೈದ್ಧಾಂತಿಕ ನೆಲೆಯನ್ನು ಒದಗಿಸಿದ ಮಹಾನ್ ನಾಯಕರಲ್ಲಿ ರಾಮ ಮನೋಹರ ಲೋಹಿಯಾ ಅವರು ಪ್ರಮುಖರಾಗಿದ್ದಾರೆ. ಸಮಾಜದಲ್ಲಿ ಮೂಲಭೂತ ಹಾಗೂ ಅಮೂಲ್ಯವಾದ ಬದಲಾವಣೆಯನ್ನು ತರಲು ಅವರು ಪ್ರತಿಪಾದಿಸಿದ ತತ್ವವೇ "ಸಪ್ತ ಕ್ರಾಂತಿ". ಈ ಸಪ್ತ ಕ್ರಾಂತಿಗಳು ಸಮಾನತೆ, ನ್ಯಾಯ ಮತ್ತು ಮಾನವಮೌಲ್ಯಗಳ ಆಧಾರದ ಮೇಲೆ ಹೊಸ ಸಮಾಜ ವ್ಯವಸ್ಥೆಯನ್ನು ನಿರ್ಮಿಸಲು ಮಾರ್ಗದರ್ಶಕವಾಗಿವೆ. ಲೋಹಿಯಾ ಅವರ "ಸಪ್ತ ಕ್ರಾಂತಿ" ತತ್ವದ ವಿವರಣೆಯಲ್ಲಿ ಗಂಡು–ಹೆಣ್ಣು ಸಮಾನತೆಗಾಗಿ ಹೋರಾಟ ಮಹಿಳೆಯರ ಮೇಲೆ ನಡೆಯುವ ಅನ್ಯಾಯ ಮತ್ತು ಅಸಮಾನತೆಯನ್ನು ನಿವಾರಿಸಿ, ಲಿಂಗ ಸಮಾನತೆಯನ್ನು ಸ್ಥಾಪಿಸುವುದು. ವರ್ಣ–ಮೈಬಣ್ಣ ಆಧಾರಿತ ಅಸಮಾನತೆ ವಿರುದ್ಧ ಹೋರಾಟ: ಚರ್ಮದ ಬಣ್ಣ ಅಥವಾ ವರ್ಣದ ಆಧಾರದ ಮೇಲೆ ಉಂಟಾಗುವ ರಾಜಕೀಯ ಮತ್ತು ಆರ್ಥಿಕ ಅಸಮಾನತೆಯನ್ನು ನಿವಾರಿಸುವುದು. ಜಾತಿ ವ್ಯವಸ್ಥೆಯ ಅಸಮಾನತೆ ವಿರುದ್ಧ ಹೋರಾಟ. ಸಂಪ್ರದಾಯಗಳಿಂದ ನಿರ್ಮಿತವಾದ ಹಿಂದುಳಿದ ಮತ್ತು

ಮುಂದುವರಿದ ಜಾತಿಗಳ ನಡುವಿನ ಅಸಮಾನತೆಯನ್ನು ನಿವಾರಿಸಿ, ಹಿಂದುಳಿದವರಿಗೆ ವಿಶೇಷ ಅವಕಾಶಗಳನ್ನು ಒದಗಿಸುವುದು. ವಿದೇಶಿ ಆಳ್ವಿಕೆ ಮತ್ತು ಗುಲಾಮಗಿರಿ ವಿರುದ್ಧ ಹೋರಾಟ. ವಿದೇಶಿ ಪ್ರಭುತ್ವಕ್ಕೆ ವಿರೋಧವಾಗಿ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಜಾಗತಿಕ ಪ್ರಜಾಪ್ರಭುತ್ವವನ್ನು ಬೆಂಬಲಿಸುವುದು. ಆರ್ಥಿಕ ಅಸಮಾನತೆ ವಿರುದ್ಧ ಹೋರಾಟ, ಯೋಜಿತ ಉತ್ಪಾದನೆ ಮತ್ತು ಸಮಾನ ಸಂಪತ್ತಿನ ಹಂಚಿಕೆಯ ಮೂಲಕ ಖಾಸಗಿ ಬಂಡವಾಳದ ಅತಿರೇಕ ಮತ್ತು ಶೋಷಣೆಗೆ ವಿರೋಧ ವ್ಯಕ್ತಪಡಿಸುವುದು. ಖಾಸಗಿ ಜೀವನದ ಮೇಲಿನ ಅನ್ಯಾಯ ಆಕ್ರಮಣಗಳ ವಿರುದ್ಧ ಹೋರಾಟ, ವ್ಯಕ್ತಿಯ ಸ್ವಾತಂತ್ರ್ಯವನ್ನು ಕಾಪಾಡುವ ಪ್ರಜಾಪ್ರಭುತ್ವ ಮಾರ್ಗಗಳನ್ನು ಅನುಸರಿಸುವುದು. ಯುದ್ಧ ಮತ್ತು ಆಯುಧಗಳ ವಿರುದ್ಧ ಸತ್ಯಾಗ್ರಹ, ಶಾಂತಿ, ಅಹಿಂಸಾ ಮತ್ತು ಸತ್ಯಾಗ್ರಹದ ಮೂಲಕ ವಿಶ್ವಶಾಂತಿಯನ್ನು ಸ್ಥಾಪಿಸುವುದು. ಈ ರೀತಿ "ಸಪ್ತ ಕ್ರಾಂತಿ"ಗಳ ಸುತ್ತಲೂ ಲೋಹಿಯಾ ಅವರು ತಮ್ಮ ಚಿಂತನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಸಮಾಜದಲ್ಲಿ ಸಮಗ್ರ ಪರಿವರ್ತನೆ ತರಲು ಚಳುವಳಿಗಳನ್ನು ವ್ಯಾಪಕವಾಗಿ ಹರಡಿದರು. ಅವರ ಈ ತತ್ವಗಳು ಇಂದಿಗೂ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸಲು ಪ್ರೇರಣೆಯಾಗಿ ಉಳಿದಿವೆ.

ರಾಮ ಮನೋಹರ ಲೋಹಿಯಾ ಅವರು ಜನಾಂಗೀಯ ಭೇದಭಾವ ಮತ್ತು ವರ್ಣಭೇದ ನೀತಿಗಳ ವಿರುದ್ಧ ಗಟ್ಟಿಯಾದ ನಿಲುವು ಹೊಂದಿದ್ದರು. ಅವರು ಕೇವಲ ತಾತ್ವಿಕವಾಗಿ ವಿರೋಧ ವ್ಯಕ್ತಪಡಿಸಿದಷ್ಟೇ ಅಲ್ಲ, ಪ್ರಾಯೋಗಿಕವಾಗಿ ಸಹ ಹೋರಾಟಗಳಲ್ಲಿ ಪಾಲ್ಗೊಂಡರು. ಅಮೆರಿಕಾದಲ್ಲಿ ನಡೆದ ನೀಗ್ರೋ ಸಮಾನ ಹಕ್ಕುಗಳ ಚಳುವಳಿಗೆ ಬೆಂಬಲ ಸೂಚಿಸಿ, ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ 1964ರಲ್ಲಿ ಬಂಧಿತರಾಗಿದ್ದರು ಎಂಬುದು ಅವರ ಬದ್ಧತೆಯನ್ನು ತೋರಿಸುತ್ತದೆ. ಲೋಹಿಯಾ ಅವರು ಆರ್ಥಿಕ ಸಮಾನತೆಯ ವಿಷಯದಲ್ಲಿ ಖಚಿತವಾದ ನಂಬಿಕೆ ಹೊಂದಿದ್ದರು. ಆದರೆ ಅವರು ಸಂಪೂರ್ಣ ಸಮಾನತೆ ಸಾಧ್ಯವಿಲ್ಲವೆಂಬ ವಾಸ್ತವಿಕತೆಯನ್ನು ಒಪ್ಪಿಕೊಂಡು, ಅದರ ಬದಲು ಸಾಧ್ಯವಾಗುವ ಗರಿಷ್ಠ ಸಮಾನತೆ ಸಾಧಿಸುವುದನ್ನು ಉದ್ದೇಶಿಸಿದರು. ಅವರ ದೃಷ್ಟಿಯಲ್ಲಿ, ಸಮಾಜದಲ್ಲಿ ಸಂಪತ್ತಿನ ಸಮನ್ವಿತ ಹಂಚಿಕೆ, ಶೋಷಣೆಯ ಕಡಿತ ಮತ್ತು ಎಲ್ಲ ವರ್ಗಗಳಿಗೂ ಸಮಾನ ಅವಕಾಶಗಳ ಒದಗಿಸುವಿಕೆ ಮುಖ್ಯವಾಗಿತ್ತು. ಈ ರೀತಿಯಾಗಿ, ಲೋಹಿಯಾ ಅವರ ಚಿಂತನೆಗಳು ತಾತ್ವಿಕ ಆದರ್ಶಗಳ ಜೊತೆಗೆ ಪ್ರಾಯೋಗಿಕ ದೃಷ್ಟಿಕೋನವನ್ನು ಹೊಂದಿದ್ದು, ಸಮಾನತೆ ಮತ್ತು ನ್ಯಾಯದ ಆಧಾರದ ಮೇಲೆ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶಕವಾಗಿವೆ.

ರಾಮ ಮನೋಹರ ಲೋಹಿಯಾ ಅವರು ಜನಸಾಮಾನ್ಯರ ಭಾಷೆಗೆ ಹೆಚ್ಚಿನ ಮಹತ್ವ ನೀಡಿದರು. ಜನಭಾಷೆಯನ್ನು ಕಡೆಗಣಿಸಿ, ಉಳಿಗಮಾನ್ಯ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿಯೂ ಆಡಳಿತ ಭಾಷೆಯಾಗಿಯೂ ಬಳಸುವ ಪ್ರವೃತ್ತಿಯನ್ನು ಅವರು ತೀವ್ರವಾಗಿ ವಿರೋಧಿಸಿದರು. ಅವರ ದೃಷ್ಟಿಯಲ್ಲಿ,

ಭಾಷೆ ಜನರ ಶಕ್ತಿಯ ಸಾಧನವಾಗಿರಬೇಕು, ಆಡಳಿತದ ಅಡೆತಡೆಯಾಗಬಾರದು. ಸಮಾಜದ ಆರ್ಥಿಕ ವೈಷಮ್ಯವನ್ನು ಲೋಹಿಯಾ ಸ್ಪಷ್ಟವಾಗಿ ಗ್ರಹಿಸಿದ್ದರು. ಶ್ರೀಸಾಮಾನ್ಯರ ಕಡು ದಾರಿದ್ರ್ಯ ಮತ್ತು ಅವರ ಸಂಕಷ್ಟಗಳು ಸಮಾಜದ ಒಂದು ಮುಖವಾಗಿದ್ದರೆ, ಶ್ರೀಮಂತರ ಐಷಾರಾಮಿ ಜೀವನ ಇನ್ನೊಂದು ಮುಖವಾಗಿದ್ದು, ಈ ವೈಷಮ್ಯವೇ ಸಾಮಾಜಿಕ ಅನ್ಯಾಯದ ಮೂಲ ಎಂದು ಅವರು ಸೂಚಿಸಿದರು. ಆದ್ದರಿಂದ, ಸಮಾನ ಅವಕಾಶಗಳು ಮತ್ತು ಸಮನ್ಯಾಯದ ಆರ್ಥಿಕ ವ್ಯವಸ್ಥೆ ಅಗತ್ಯವೆಂದು ಒತ್ತಿಹೇಳಿದರು. ಇದಲ್ಲದೆ, ಇತಿಹಾಸವನ್ನು ಭಾರತೀಯರ ದೃಷ್ಟಿಕೋನದಿಂದಲೇ ಅರ್ಥಮಾಡಿಕೊಳ್ಳಬೇಕು ಎಂದು ಲೋಹಿಯಾ ಅಭಿಪ್ರಾಯಪಟ್ಟರು. ಮಹಮ್ಮದ್ ಘಜನಿ, ಮಹಮ್ಮದ್ ಘೋರಿ, ಬಾಬರ್ ಮೊದಲಾದವರನ್ನು ವಿದೇಶಿ ಆಕ್ರಮಣಕಾರರಾಗಿ ವಿಮರ್ಶಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಬೇಕು ಎಂದು ಅವರು ತಿಳಿಸಿದರು. ಲೋಹಿಯಾ ಅವರ ಚಿಂತನೆಗಳು ಭಾಷಾ ಪ್ರಜಾಸತ್ತಾತ್ಮಕತೆ, ಆರ್ಥಿಕ ಸಮಾನತೆ ಮತ್ತು ಇತಿಹಾಸದ ಸ್ವದೇಶಿ ದೃಷ್ಟಿಕೋನವನ್ನು ಒತ್ತಿಹೇಳುತ್ತವೆ.

ರಾಮ ಮನೋಹರ ಲೋಹಿಯಾ ಅವರು ಬಂಡವಾಳಶಾಹಿಯಿಂದ ಉಂಟಾಗುತ್ತಿರುವ ಅಸಮಾನತೆಗಳು ಮತ್ತು ಸಾಮಾಜಿಕ ಅನ್ಯಾಯಗಳಿಂದ ಮಾನವಕುಲವನ್ನು ರಕ್ಷಿಸಲು, ಸಮಾಜವಾದವು ತನ್ನದೇ ಆದ ಸ್ವತಂತ್ರ ತಾತ್ವಿಕತೆ ಮತ್ತು ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳಬೇಕು ಎಂದು ಬಯಸಿದರು. ಅವರ ದೃಷ್ಟಿಯಲ್ಲಿ, ಪಾಶ್ಚಾತ್ಯ ಮಾದರಿಗಳನ್ನು ಅಂಧವಾಗಿ ಅನುಸರಿಸುವುದಕ್ಕಿಂತ, ಭಾರತೀಯ ಪರಿಸ್ಥಿತಿಗೆ ಹೊಂದುವ ಸಮಾಜವಾದವನ್ನು ರೂಪಿಸುವುದು ಅತ್ಯಾವಶ್ಯಕವಾಗಿತ್ತು. ಲೋಹಿಯಾ ಅವರು ದೊಡ್ಡ ಜಮೀನ್ದಾರರನ್ನು ಹೊರತುಪಡಿಸಿ, ಭಾರತದ ಬಹುಸಂಖ್ಯಾತ ರೈತರು ಮತ್ತು ಕೃಷಿಕ ವರ್ಗವೇ ಸಮಾಜವಾದದ ನಿಜವಾದ ಆಧಾರ ಎಂದು ನಂಬಿದ್ದರು. ಗ್ರಾಮೀಣ ಜನರ ಶಕ್ತಿ ಮತ್ತು ಪಾಲ್ಗೊಳ್ಳುವಿಕೆ ಮೂಲಕವೇ ಸಮಾನತೆಯ ಸಮಾಜವನ್ನು ನಿರ್ಮಿಸಬಹುದು ಎಂದು ಅವರು ಅಭಿಪ್ರಾಯಪಟ್ಟರು. ಇದಲ್ಲದೆ, ಎಲ್ಲಾ ಬಗೆಯ ಅನ್ಯಾಯಗಳ ವಿರುದ್ಧ ವ್ಯಕ್ತಿಗತ ಹಾಗೂ ಸಾಮೂಹಿಕ ಮಟ್ಟದಲ್ಲಿ ನಾಗರಿಕ ಅವಿಧೇಯತೆಯ ಮೂಲಕ ಹೋರಾಟ ನಡೆಸಬೇಕು ಎಂದು ಅವರು ಕರೆ ನೀಡಿದರು. ಈ ಹೋರಾಟಗಳು ಶಾಂತಿಯುತವಾಗಿದ್ದು, ಜನಪರ ಚಳವಳಿಗಳ ರೂಪದಲ್ಲಿ ನಡೆಯಬೇಕು ಎಂದು ಅವರು ಒತ್ತಿಹೇಳಿದರು. ಲೋಹಿಯಾ ಅವರ ಚಿಂತನೆಗಳು ಸಮಾಜದಲ್ಲಿ ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಸಾಧಿಸಲು ಪ್ರಾಯೋಗಿಕ ಹಾಗೂ ಜನಕೇಂದ್ರಿತ ಮಾರ್ಗವನ್ನು ಸೂಚಿಸುತ್ತವೆ.

ರಾಮ ಮನೋಹರ ಲೋಹಿಯಾ ಅವರ ಚಿಂತನೆಗಳಲ್ಲಿ ಜಾತಿ ಮತ್ತು ಮಹಿಳಾ ಅಸಮಾನತೆಗಳು ಪ್ರಮುಖ ಸಮಸ್ಯೆಗಳಾಗಿ ಕಾಣಿಸಿಕೊಂಡಿವೆ. ಅವರ ಅಭಿಪ್ರಾಯದಲ್ಲಿ, ಜಾತಿ ವ್ಯವಸ್ಥೆ ಮತ್ತು ಹೆಣ್ಣು–ಗಂಡು ಅಸಮಾನತೆಗಳಲ್ಲಿ ಕಂಡುಬರುವ ಪ್ರತ್ಯೇಕತಾವಾದಿ ಮನೋಭಾವವೇ ಭಾರತೀಯ ಸಮಾಜದ ಅಧೋಗತಿಗೆ ಪ್ರಮುಖ ಕಾರಣವಾಗಿದೆ. ಈ ಎರಡು ಬಗೆಯ ಪ್ರತ್ಯೇಕತಾವಾದಿ ಮನಸ್ಥಿತಿಗಳು

ಮತ್ತು ಬಡತನ ಪರಸ್ಪರ ಅವಲಂಬಿತವಾಗಿವೆ ಎಂದು ಲೋಹಿಯಾ ನಂಬಿದ್ದರು. ಅಂದರೆ, ಜಾತಿ ಮತ್ತು ಲಿಂಗ ಅಸಮಾನತೆಗಳು ಬಡತನವನ್ನು ಹೆಚ್ಚಿಸುತ್ತವೆ; ಅದೇ ಸಮಯದಲ್ಲಿ ಬಡತನವೂ ಈ ಅಸಮಾನತೆಗಳನ್ನು ಇನ್ನಷ್ಟು ಗಾಢಗೊಳಿಸುತ್ತದೆ. ಆದ್ದರಿಂದ, ಈ ಪ್ರತ್ಯೇಕತಾವಾದಿ ಮನೋಭಾವಗಳ ವಿರುದ್ಧ ಪ್ರಜ್ಞಾಪೂರ್ವಕ ಮತ್ತು ನಿರಂತರ ಹೋರಾಟ ನಡೆಸುವುದು ಅನಿವಾರ್ಯ ಎಂದು ಅವರು ಒತ್ತಿಹೇಳಿದರು. ಇಂತಹ ಸಾಮಾಜಿಕ ಅನ್ಯಾಯಗಳನ್ನು ನಿರ್ಮೂಲ ಮಾಡದೇ, ಕೇವಲ ಆರ್ಥಿಕ ಬಡತನದ ವಿರುದ್ಧ ಹೋರಾಟ ನಡೆಸುವುದರಿಂದ ಸಮಗ್ರ ಸಮಾನತೆ ಸಾಧಿಸಲು ಸಾಧ್ಯವಿಲ್ಲ ಎಂದು ಲೋಹಿಯಾ ಸ್ಪಷ್ಟವಾಗಿ ತಿಳಿಸಿದ್ದಾರೆ. ಲೋಹಿಯಾ ಅವರ ಈ ದೃಷ್ಟಿಕೋನವು ಸಾಮಾಜಿಕ ಮತ್ತು ಆರ್ಥಿಕ ಹೋರಾಟಗಳನ್ನು ಪರಸ್ಪರ ಸಂಬಂಧಿತವಾಗಿ ನೋಡಬೇಕೆಂಬ ಅಗತ್ಯವನ್ನು ಬಲವಾಗಿ ಸೂಚಿಸುತ್ತದೆ.

ರಾಮ ಮನೋಹರ ಲೋಹಿಯಾ ಅವರ ಪ್ರಕಾರ, ಭಾರತೀಯ ಮಹಿಳೆಯರು ಅನೇಕ ಮಟ್ಟಗಳಲ್ಲಿ ನಿರಂತರ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅನಾದಿಕಾಲದಿಂದಲೂ ಜಗತ್ತಿನ ಬಹುತೇಕ ಸಮಾಜಗಳಲ್ಲಿ ಗಂಡಿನ ಪ್ರಭುತ್ವ, ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಸಂಪ್ರದಾಯಗಳಿಂದ ಮಹಿಳೆಯರು ಹಿಂಸೆಗೆ, ದಬ್ಬಾಳಿಕೆಗೆ ಒಳಗಾಗಿದ್ದಾರೆ. ಲೋಹಿಯಾ ಅವರು ಮಹಿಳೆಯರ ಸಮಸ್ಯೆಗಳು ಕೇವಲ ಮದುವೆ, ವಾರಸತ್ವ ಅಥವಾ ಆಸ್ತಿ ಹಕ್ಕುಗಳಂತಹ ಕಾನೂನುಪರ ವಿಷಯಗಳಿಗೆ ಮಾತ್ರ ಸೀಮಿತವಾಗಿಲ್ಲವೆಂದು ಸ್ಪಷ್ಟವಾಗಿ ಅರಿತುಕೊಂಡಿದ್ದರು. ಅವರು ಮಹಿಳೆಯರ ದೈನಂದಿನ ಜೀವನದ ವಾಸ್ತವ ಸಮಸ್ಯೆಗಳತ್ತ ಗಮನಸೆಳೆದರು. ವಿಶೇಷವಾಗಿ ಗ್ರಾಮೀಣ ಭಾರತದಲ್ಲಿ, ಕುಡಿಯುವ ನೀರಿನ ಕೊರತೆ, ಶೌಚಾಲಯಗಳ ಅಭಾವ ಇವು ಮಹಿಳೆಯರ ಜೀವನವನ್ನು ಬಹಳ ಕಷ್ಟಕರವಾಗಿಸುತ್ತವೆ ಎಂದು ಅವರು ತಿಳಿಸಿದರು. ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ದೂರದ ಬಾವಿ ಅಥವಾ ಹೊಳೆಯಿಂದ ನೀರು ಹೊತ್ತು ತರುವ ಕಷ್ಟ, ಶೌಚದ ಸೌಲಭ್ಯಗಳಿಲ್ಲದ ಕಾರಣ ಅಂಧಕಾರದ ಸಮಯದಲ್ಲಿ ಮಾತ್ರ ಹೊರಗೆ ಹೋಗಬೇಕಾದ ಅವಸ್ಥೆ ಇವು ಮಹಿಳೆಯರ ಗೌರವ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರುವ ಸಮಸ್ಯೆಗಳಾಗಿವೆ. ಈ ಹಿನ್ನೆಲೆಯಲ್ಲಿ, ಮಹಿಳೆಯರ ಜೀವನವು ಮನೆಯ ಕೆಲಸಗಳು ಮತ್ತು ಅಡುಗೆಮನೆಯಲ್ಲಿ ಸೀಮಿತಗೊಂಡು, ಅಂತ್ಯವಿಲ್ಲದ ಶ್ರಮ ಮತ್ತು ಒಂದು ರೀತಿಯ ಗುಲಾಮಗಿರಿಯ ಸ್ಥಿತಿಗೆ ತಲುಪಿದೆ ಎಂದು ಲೋಹಿಯಾ ಅಭಿಪ್ರಾಯಪಟ್ಟರು. ಈ ರೀತಿಯಾಗಿ, ಲೋಹಿಯಾ ಅವರು ಮಹಿಳಾ ಸಮಸ್ಯೆಗಳನ್ನು ಸಮಗ್ರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ, ನಿಜವಾದ ಸಮಾನತೆ ಸಾಧಿಸಲು ಮೂಲಭೂತ ಸೌಲಭ್ಯಗಳು ಮತ್ತು ಗೌರವಯುತ ಜೀವನ ಅವಶ್ಯಕವೆಂದು ಒತ್ತಿಹೇಳಿದರು.

ಭಾರತದ ರಾಜಕಾರಣದಲ್ಲಿ ರಾಮ ಮನೋಹರ ಲೋಹಿಯಾ ಅವರು ಕಣ್ಮರೆಯಾಗಿ ದಶಕಗಳು ಕಳೆದಿದ್ದರೂ, ಅವರ ವಿಚಾರಧಾರೆಗಳು ಮತ್ತು ಅವುಗಳನ್ನು ಸಾಧಿಸಲು ನಡೆಸಿದ ಹೋರಾಟಗಳು ಇಂದಿಗೂ ಇತಿಹಾಸದ ಮಹತ್ವದ ಭಾಗವಾಗಿ ಉಳಿದಿವೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದಿ ರಾಜಕಾರಣವು ಕೇವಲ ತಾತ್ವಿಕ ಚಿಂತನೆಯಷ್ಟೇ ಅಲ್ಲ, ಪ್ರಾಯೋಗಿಕ ಹೋರಾಟಗಳ ಮೂಲಕವೂ ತನ್ನ ಪ್ರಭಾವವನ್ನು ತೋರಿಸಿದೆ. ಈ ಸಮಾಜವಾದಿ ಚಿಂತನೆಯ ಒಂದು ಸ್ಪಷ್ಟ ಅಭಿವ್ಯಕ್ತಿಯನ್ನು ಕರ್ನಾಟಕದಲ್ಲಿ ಕಾಣಬಹುದು. ಲೋಹಿಯಾ ಅವರ ವಿಚಾರಧಾರೆಯಿಂದ ಅನೇಕ ನಾಯಕರು ಪ್ರೇರಿತರಾಗಿ, ಸಮಾಜವಾದಿ ತತ್ವಗಳ ಆಧಾರದ ಮೇಲೆ ಜನಪರ ಹೋರಾಟಗಳನ್ನು ನಡೆಸಿದರು. ಈ ಹೋರಾಟಗಳು ಸಾಮಾನ್ಯ ಜನರ ಸಮಸ್ಯೆಗಳಿಗೆ ಧ್ವನಿಯಾಗಿದ್ದು, ಸಮಾಜದಲ್ಲಿ ಬದಲಾವಣೆಯ ಭರವಸೆಯನ್ನು ಮೂಡಿಸಿವೆ. ಅಂತಹ ಪ್ರಮುಖ ಹೋರಾಟಗಳಲ್ಲಿ ಕಾಗೋಡು ಸತ್ಯಾಗ್ರಹ ಒಂದು ಮಹತ್ವದ ಉದಾಹರಣೆಯಾಗಿದೆ. ಈ ಸತ್ಯಾಗ್ರಹವು ಭೂಹೀನ ರೈತರ ಹಕ್ಕುಗಳಿಗಾಗಿ ನಡೆದ ಜನಪರ ಚಳುವಳಿಯಾಗಿದ್ದು, ಸಮಾಜವಾದಿ ಚಿಂತನೆಯ ಪ್ರಾಯೋಗಿಕ ರೂಪವನ್ನು ತೋರಿಸುತ್ತದೆ. ಲೋಹಿಯಾ ಅವರ ಸಮಾಜವಾದಿ ಚಿಂತನೆಗಳು ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಚಳವಳಿಗಳ ಮೇಲೆ ದೀರ್ಘಕಾಲಿಕ ಪ್ರಭಾವ ಬೀರಿದ್ದು, ಇಂದಿಗೂ ಅವು ಪ್ರೇರಣೆಯಾಗಿ ಉಳಿದಿವೆ.

ರಾಮ ಮನೋಹರ ಲೋಹಿಯಾ ಅವರ ಅಭಿಪ್ರಾಯದಲ್ಲಿ, ಸಮಾಜವಾದವು ಕೇವಲ ಸಿದ್ಧಾಂತಗಳ ಮೂಲಕವಲ್ಲ, ಜನರ ನೈಜ ಹೋರಾಟಗಳ ಮೂಲಕವೇ ರೂಪುಗೊಳ್ಳಬೇಕು. ಈ ಕಾರಣದಿಂದ ಅವರು ಸಮಾಜವಾದಿ ಪಕ್ಷವು ಇತರೆ ರಾಜಕೀಯ ಪಕ್ಷಗಳಿಗಿಂತ ಕ್ರಾಂತಿಕಾರಕವಾಗಿ ಭಿನ್ನವಾಗಿರಬೇಕು ಎಂದು ವಾದಿಸಿದರು. ಲೋಹಿಯಾ ಅವರು ತಮ್ಮ ಸಹೋದ್ಯೋಗಿಗಳಿಗೆ ಸಂಸದೀಯ ರಾಜಕಾರಣದ ಮಿತಿಗಳು ಮತ್ತು ಅಪಾಯಗಳನ್ನು ಮನವರಿಕೆ ಮಾಡಲು ನಿರಂತರವಾಗಿ ಶ್ರಮಿಸಿದರು. ಅವರ ದೃಷ್ಟಿಯಲ್ಲಿ, ಕೇವಲ ಚುನಾವಣಾ ರಾಜಕಾರಣದ ಮೇಲೆ ಅವಲಂಬಿಸುವುದು ಸಮಾಜವಾದಿ ಚಳುವಳಿಗೆ ಅಪಾಯಕಾರಿಯಾಗಿದೆ. ಅವರು ಸ್ಪಷ್ಟವಾಗಿ ಹೇಳಿದ್ದು ಏನೆಂದರೆ, ಸಮಾಜವಾದಿ ಪಕ್ಷವು ಇತರೆ ಪಕ್ಷಗಳಂತೆ ಚುನಾವಣೆಯಲ್ಲಿ ಜಯ ಸಾಧಿಸುವುದನ್ನೇ ಏಕೈಕ ಗುರಿಯನ್ನಾಗಿ ಪರಿಗಣಿಸಬಾರದು. ಬದಲಾಗಿ, ಚುನಾವಣೆಯಾಚೆಯ ಸಮಾಜ ಪರಿವರ್ತನೆಗೆ ಆದ್ಯತೆ ನೀಡಬೇಕು. ಜನರ ನಡುವೆ ಕಾರ್ಯನಿರ್ವಹಿಸುವ, ಹೋರಾಟಾಧಾರಿತ ರಾಜಕೀಯದ ಮೂಲಕ ಸಮಾನತೆ ಮತ್ತು ನ್ಯಾಯವನ್ನು ಸಾಧಿಸುವ ದಿಕ್ಕಿನಲ್ಲಿ ಸಮಾಜವಾದಿ ಪಕ್ಷ ಮುನ್ನಡೆಯಬೇಕು ಎಂದು ಅವರು ಒತ್ತಿಹೇಳಿದರು. ಈ ಮೂಲಕ, ಲೋಹಿಯಾ ಅವರು ಸಮಾಜವಾದಿ ರಾಜಕಾರಣವನ್ನು ಜನಪರ ಹೋರಾಟ, ಸಾಮಾಜಿಕ ಬದಲಾವಣೆ ಮತ್ತು ತಾತ್ವಿಕ ಬದ್ಧತೆಯ ಆಧಾರದ ಮೇಲೆ ರೂಪಿಸಲು ಪ್ರಯತ್ನಿಸಿದರು. ಈ ಕಾರಣದಿಂದಲೇ ರಾಮ ಮನೋಹರ ಲೋಹಿಯಾ ಅವರು ಚುನಾವಣೆಯ ಚೌಕಟ್ಟಿನಾಚೆಯೂ

ಸಮಾಜವಾದಿ ಪಕ್ಷ ಬೆಳೆದು ನಿಲ್ಲುವಂತೆ ಅನೇಕ ಸೂತ್ರಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿದರು. ಅವರ ದೃಷ್ಟಿಯಲ್ಲಿ ಸಮಾಜವಾದಿ ರಾಜಕಾರಣವು ಕೇವಲ ಮತಪೆಟ್ಟಿಗೆಯ ಮಟ್ಟಕ್ಕೆ ಸೀಮಿತವಾಗದೇ, ಜನರ ಜೀವನದಲ್ಲಿ ನೇರ ಬದಲಾವಣೆಯನ್ನು ತರುವ ಹೋರಾಟಗಳ ಮೂಲಕ ರೂಪುಗೊಳ್ಳಬೇಕು.

ಕರ್ನಾಟಕದಲ್ಲಿ ಸಮಾಜವಾದಿ ಪಕ್ಷವು ವಿಶೇಷವಾಗಿ ತುಳಿತಕ್ಕೊಳಗಾದ ಮತ್ತು ಅವಮಾನ ಅನುಭವಿಸಿದ ವರ್ಗಗಳಿಗೆ ಹೊಸ ಭರವಸೆಯನ್ನು ಒದಗಿಸಿದ ಜನಪರ ಶಕ್ತಿಯಾಗಿ ಬೆಳೆದಿತು. ಈ ಪಕ್ಷವು ವಿವಿಧ ಭಾಗಗಳಲ್ಲಿ ರೈತ ಹೋರಾಟಗಳು ಮತ್ತು ಕಾರ್ಮಿಕ ಚಳುವಳಿಗಳನ್ನು ಸಂಘಟಿಸಿ, ಅವುಗಳನ್ನು ಯಶಸ್ವಿಯಾಗಿ ಮುಂದೂಡಿತು. ಈ ರೀತಿಯ ಹೋರಾಟಗಳಲ್ಲಿ ಕಾಗೋಡು ಸತ್ಯಾಗ್ರಹ ಅತ್ಯಂತ ಪ್ರಮುಖವಾಗಿದೆ. ಇದು ಭೂಹೀನ ರೈತರ ಹಕ್ಕುಗಳಿಗಾಗಿ ನಡೆದ ಮಹತ್ವದ ಚಳುವಳಿಯಾಗಿದ್ದು, ಸಮಾಜವಾದಿ ಚಿಂತನೆಯ ಪ್ರಾಯೋಗಿಕ ಅನ್ವಯವನ್ನು ತೋರಿಸುತ್ತದೆ. ಸಮಾಜವಾದಿ ಪಕ್ಷದಲ್ಲಿ ಅಧಿಕಾರದ ಆಸೆಗಿಂತ ಜನಸೇವೆ ಮತ್ತು ಸಂಘಟನೆಯೇ ಮುಖ್ಯ ಎಂಬ ನಿಲುವಿನೊಂದಿಗೆ ಕೆಲಸ ಮಾಡಿದ ನಿಷ್ಠಾವಂತ ನಾಯಕರು ಇದ್ದರು. ಅವರು ಚುನಾವಣಾ ಜಯವನ್ನು ಮಾತ್ರ ಗುರಿಯಾಗಿಸದೇ, ದಲಿತರು, ದುರ್ಬಲ ವರ್ಗಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಸಂಘಟನೆಯಲ್ಲಿ ತೊಡಗಿ, ಸಾಮಾಜಿಕ ನ್ಯಾಯ ಸಾಧಿಸಲು ಪ್ರಯತ್ನಿಸಿದರು. ಸಮಾಜವಾದಿ ಪಕ್ಷವು ಕರ್ನಾಟಕದಲ್ಲಿ ಹೋರಾಟಾಧಾರಿತ ರಾಜಕಾರಣದ ಮೂಲಕ ಸಮಾಜದಲ್ಲಿ ಸಮಾನತೆ ಮತ್ತು ಗೌರವವನ್ನು ಸ್ಥಾಪಿಸಲು ಮಹತ್ವದ ಪಾತ್ರ ವಹಿಸಿದೆ.

ರಾಮ ಮನೋಹರ ಲೋಹಿಯಾ ಅವರು ಮತ್ತೆ ಮತ್ತೆ ಎಚ್ಚರಿಸಿದ್ದ ಅಪಾಯಗಳಲ್ಲೇ ಸಮಾಜವಾದಿ ನಾಯಕರು ಸಿಲುಕಿಕೊಂಡರು ಎಂಬುದು ಸ್ಪಷ್ಟವಾಗುತ್ತದೆ. ವಿಶೇಷವಾಗಿ ಕರ್ನಾಟಕದಲ್ಲಿ ಸಮಾಜವಾದಿಗಳು ಜನರಲ್ಲಿ ಜಾಗೃತಿ ಮೂಡಿಸುವ ಬದಲು, ಅವರ ತಾತ್ಕಾಲಿಕ ಅಗತ್ಯಗಳನ್ನು ಪೂರೈಸುವ ಭರವಸೆಗಳನ್ನು ನೀಡುವ ರಾಜಕೀಯದ ಕಡೆಗೆ ತಿರುಗಿದರು. ಇದರ ಪರಿಣಾಮವಾಗಿ, ಚುನಾವಣೆಯನ್ನೇ ರಾಜಕಾರಣದ ಕೇಂದ್ರವಾಗಿ ಪರಿಗಣಿಸಿ, ಹೋರಾಟಾಧಾರಿತ ರಾಜಕೀಯವನ್ನು ಕಡೆಗಣಿಸಿದರು. ಈ ಬೆಳವಣಿಗೆಗಳಿಂದ ಸಮಾಜವಾದಿ ಚಳುವಳಿ ತನ್ನ ಮೂಲ ಸ್ವರೂಪವಾದ ಸಂಘರ್ಷದ ಮಾರ್ಗವನ್ನು ಬಿಟ್ಟು, ಸಮಜಾಯಿಷಿಯ ರಾಜಕೀಯದ ದಾರಿಯನ್ನು ಹಿಡಿಯಿತು. ಸಮಾಜ ಪರಿವರ್ತನೆಯ ಉದ್ದೇಶದಿಂದ ದೂರ ಸರಿದು, ಅಧಿಕಾರ ಮತ್ತು ಸ್ಥಾನಮಾನಗಳ ಆಧಾರದ ಮೇಲೆ ರಾಜಕೀಯ ಮೌಲ್ಯಗಳನ್ನು ಅಳೆಯುವ ಸ್ಥಿತಿ ಉಂಟಾಯಿತು. ಇದರ ಪರಿಣಾಮವಾಗಿ, ಸಮಾಜವಾದಿಗಳಲ್ಲಿ ಕೆಲವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು; ಇನ್ನೂ ಕೆಲವರು ನೇರವಾಗಿ ಸೇರದೇ ಇದ್ದರೂ ಅವರ ರಾಜಕೀಯ ಧೋರಣೆ ಕಾಂಗ್ರೆಸ್ಸಿನಂತೆಯೇ ರೂಪುಗೊಂಡಿತು. ಉಳಿದವರು ಸ್ಪಷ್ಟ ದಿಕ್ಕಿಲ್ಲದೆ ಚದುರಿಹೋದರು. ಈ ಪ್ರಕ್ರಿಯೆಯಲ್ಲಿ ಸಮಾಜವಾದಿ ಪಕ್ಷ ತನ್ನ

ವೈಶಿಷ್ಟ್ಯತೆಯನ್ನು ಕಳೆದುಕೊಂಡು, ಕಾಂಗ್ರೆಸ್ಸಿನ ಪ್ರಭಾವಕ್ಕೆ ಅವಕಾಶ ಮಾಡಿಕೊಟ್ಟಿತು. ಕಾಂಗ್ರೆಸ್ಸಿನಂತೆಯೇ ಕಾಣಿಸಿಕೊಳ್ಳಲಾರಂಭಿಸಿದ ಸಮಾಜವಾದಿ ಪಕ್ಷವನ್ನು ಜನರು ಕ್ರಮೇಣ ತಿರಸ್ಕರಿಸಲು ಆರಂಭಿಸಿದರು. ಈ ಬೆಳವಣಿಗೆಗಳು ಸಮಾಜವಾದಿ ಚಳುವಳಿಯ ದುರ್ಬಲತೆಯನ್ನು ಹಾಗೂ ಅದರ ಮೂಲ ತತ್ವಗಳಿಂದ ದೂರವಾದ ಪರಿಣಾಮಗಳನ್ನು ಸ್ಪಷ್ಟವಾಗಿ ತೋರಿಸುತ್ತವೆ.

**ಉಪಸಂಹಾರ:** ರಾಮ ಮನೋಹರ ಲೋಹಿಯಾ ಅವರ ಸಮಾಜವಾದಿ ವಿಚಾರಧಾರೆಗಳು ಭಾರತೀಯ ರಾಜಕೀಯ ಮತ್ತು ಸಾಮಾಜಿಕ ಚಿಂತನೆಗೆ ಮಹತ್ವದ ಕೊಡುಗೆಯನ್ನು ನೀಡಿವೆ. ಸಮಾನತೆ, ಸಾಮಾಜಿಕ ನ್ಯಾಯ, ಲಿಂಗ ಸಮಾನತೆ, ಜಾತಿ ನಿರ್ಮೂಲನೆ ಮತ್ತು ಆರ್ಥಿಕ ಸಮಾನತೆ ಇತ್ಯಾದಿ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಅವರು ಸಮಗ್ರ ಸಮಾಜ ಪರಿವರ್ತನೆಯ ಮಾರ್ಗವನ್ನು ಸೂಚಿಸಿದರು. ಆದರೆ ಕಾಲಕ್ರಮೇಣ ಸಮಾಜವಾದಿ ಚಳುವಳಿ ತನ್ನ ಮೂಲ ತತ್ವಗಳಿಂದ ದೂರ ಸರಿದು, ಚುನಾವಣಾ ರಾಜಕಾರಣ ಮತ್ತು ಅಧಿಕಾರದ ಆಸೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ ಪರಿಣಾಮ ಅದರ ಪ್ರಭಾವ ಕುಗ್ಗಿತು. ವಿಶೇಷವಾಗಿ ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ ಆರಂಭದಲ್ಲಿ ಜನಪರ ಹೋರಾಟಗಳ ಮೂಲಕ ಬಲ ಪಡೆದಿದ್ದರೂ, ನಂತರ ತನ್ನ ವೈಶಿಷ್ಟ್ಯತೆಯನ್ನು ಕಳೆದುಕೊಂಡು ಇತರ ರಾಜಕೀಯ ಧೋರಣೆಗಳೊಂದಿಗೆ ಮಿಶ್ರಣಗೊಂಡಿತು. ಇದರಿಂದ ಸಮಾಜವಾದಿ ಚಳುವಳಿಯ ಶಕ್ತಿಯು ಕ್ಷೀಣಗೊಂಡರೂ, ಲೋಹಿಯಾ ಅವರ ತತ್ವಗಳು ಮತ್ತು ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಸಾಮಾಜಿಕ ಅಸಮಾನತೆಗಳು, ದಾರಿದ್ರ್ಯ, ಜಾತಿ ಮತ್ತು ಲಿಂಗ ಭೇದಗಳು ಇನ್ನೂ ಸಮಾಜದಲ್ಲಿ ಇರುವವರೆಗೆ, ಅವರ ಚಿಂತನೆಗಳು ಮಾರ್ಗದರ್ಶಕವಾಗಿಯೇ ಉಳಿಯುತ್ತವೆ. ಲೋಹಿಯಾ ಅವರ ಸಮಾಜವಾದವನ್ನು ಕೇವಲ ಇತಿಹಾಸದ ಭಾಗವಾಗಿ ನೋಡುವುದಕ್ಕಿಂತ, ಅದನ್ನು ನವೀನ ಸಂದರ್ಭಗಳಿಗೆ ಹೊಂದುವಂತೆ ಪುನರ್‌ವ್ಯಾಖ್ಯಾನಿಸಿ, ಹೋರಾಟಾಧಾರಿತ ಜನಪರ ರಾಜಕಾರಣದ ಮೂಲಕ ಕಾರ್ಯರೂಪಕ್ಕೆ ತರಬೇಕಾಗಿದೆ. ಇದೇ ನಿಜವಾದ ಸಮಾಜವಾದಿ ಆದರ್ಶಗಳ ಸಾಕಾರಗೊಳಿಸುವ ದಾರಿಯಾಗುತ್ತದೆ.

**ಪರಾಮರ್ಶನ ಗ್ರಂಥಗಳು**

1. ಕಾಳೇಗೌಡ ನಾಗವಾರ ಮತ್ತು ಯು.ಆರ್.ಅನಂತಮೂರ್ತಿ, (ಸಂ), ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಅಭಿನವ ಪ್ರಕಾಶನ, ಬೆಂಗಳೂರು, 2005

2. ನಟರಾಜ ಹುಳಿಯಾರ್, (ಸಂ), ರಾಮ ಮನೋಹರ ಲೋಹಿಯಾ ಚಿಂತನೆ, ಅಕ್ಷರ ಪ್ರಕಾಶನ, ಬೆಂಗಳೂರು, 2010
3. ಶೂದ್ರ ಶ್ರೀನಿವಾಸ್, ದೇವರಾಜ ಅರಸು: ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2012
4. ಸಿ.ಬಿ.ಚಂದ್ರಶೇಖರ, ಕಾಗೋಡು: ಒಂದು ನೆನಪು, ಸಾಹಿತ್ಯ ಪ್ರಕಾಶನ, ಬೆಂಗಳೂರು, 2008
5. ಕೆ.ವಿ.ಹಂಪೆ, ಕರ್ನಾಟಕ ಚರಿತ್ರೆ ಸಂಪುಟಗಳು, ವಿಶ್ವ ಕನ್ನಡ ಸಂಶೋಧನಾ ಸಂಸ್ಥೆ, ಬೆಂಗಳೂರು, 2000
6. ಎಂ.ಕೆ.ಸೀತಾರಾಮ ಅಯ್ಯಂಗಾರ್, ಕಾಗೋಡು ಕ್ರಾಂತಿ, ಪ್ರಜಾ ಪ್ರಕಾಶನ, 1998
7. ಜಿ.ರಾಜಶೇಖರ. ಕಾಗೋಡು ಸತ್ಯಾಗ್ರಹ. ಜನಪ್ರಿಯ ಪ್ರಕಾಶನ, 2006
8. ಲಿಂಗಯ್ಯಎನ್. ಹುಚ್ಚಪ್ಪ ಮಾಸ್ತರ, ಕಾಗೋಡು ಚಳವಳಿ ಸುವರ್ಣ ಸಂಪುಟ, ಗ್ರಾಮೀಣ ಪ್ರಕಾಶನ, 2015
9. ಬಿ.ಎಂ.ಉಮೇಶ್, ಶಾಂತವೇರಿ ಗೋಪಾಲಗೌಡರ ನೆನಪು. ಚೇತನ ಪ್ರಕಾಶನ, 2003